**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾ ಯಿಕ**
**ದಂಡಾಧಿಕಾರಿಗಳವರ ನ್ಯಾಯಾಲಯ, ಹುಣಸೂರು.**

**ಸಿ.ಸಿ. ನಂ. 537/2020**

ಫಿರ್ಯಾದುದಾರರುಃ ಶ್ರೀ. ದೇವಪ್ಪ ಬಿನ್ ಲೇಟ್ ಕೆಂಪಪ್ಪ

ವಿರುದ್ಧ

ಆರೋಪಿಃ ಶ್ರೀ. ಭುಮೇಶ ಬಿನ್ ಲೇಟ್. ಲೋಕೇಶ

**ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರ ಅಡಿ ಆರೋಪಿಯ ಹೇಳಿಕೆ**

1. ಈ ಕೇಸಿನಲ್ಲಿ ನ್ಯಾಯಾಲಯದ ಮುಂದೆ ವಿಚಾರಣೆ ಮಾಡಿದ ಸಾಕ್ಷಿಯ ಹೇಳಿಕೆಯನ್ನು ಕೇಳಿದ್ದೀರಾ?

**ಉತ್ತರಃ**

2. ಪ್ರಾಸಾ1- ಶ್ರೀ. ದೇವಪ್ಪ ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಆರೋಪಿಯಾದ ನೀವು, ಫಿರ್ಯಾದುದಾರರಿಂದ ನಿಮ್ಮ ಕಾನೂನುಬದ್ದ ಅವಶ್ಯಕತೆಗಾಟ ರೂ.5,00,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ಹಣವನ್ನು ಮರುಪಾವತಿಸಲು 09.01.2020 ದಿನಾಂಕ ಇರುವ ಹುಣಸೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಚೆಕ್ ಸಂಖ್ಯೆ 838702 ಅನ್ನು ರೂ.5,00,000/- ಎಂದು ನಮೂದಿಸಿ ಪಿರ್ಯಾದುದಾರರಿಗೆ ನೀಡಿದ್ದು, ಸದರಿ ಚೆಕ್‌ನ್ನು ನಗದೀಕರಣಕ್ಕಾಗಿ ಪಿರ್ಯಾದಿಯು ತನ್ನ ಖಾತೆ ಇರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ,ಗುರುಪುರ ಶಾಖೆಗೆ ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ನಿಮ್ಮ ಖಾತೆಯಲ್ಲಿ "ಸಾಕಷ್ಟು ಹಣವಿಲ್ಲ" ಎಂಬ ಹಿಂಬರಹವನ್ನು ನೀಡಿ, ಚೆಕ್‌ನ್ನು ದಿನಾಂಕ 09.01.2020 ರಂದು ಹಿಂದಿರುಗಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

3. ಪ್ರಾಸಾ1 ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಸದರಿ ವಿಷಯದ ಬಗ್ಗೆ ಅವರು ನಿಮಗೆ ನೋಂದಾಯಿತ ಅಂಚೆಯ ಮೂಲಕ ದಿನಾಂಕ 10.01.2020 ರಂದು ನೋಟೀಸನ್ನು ಕಳುಹಿಸಿದ್ದು, ಸದರಿ ನೋಟೀಸು ನಿಮಗೆ ದಿನಾಂಕ 13.01.2020 ರಂದು ಜಾರಿಯಾಗಿದ್ದರೂ ಸಹ ನೋಟೀಸಿಗೆ ಉತ್ತರವನ್ನು ನೀಡಿರುವುದಿಲ್ಲ ಮತ್ತು ಹಣವನ್ನು ಹಿಂದಿರುಗಿಸಿರುವುದಿಲ್ಲವೆಂದು ಸಾಕ್ಷ್ಯ

ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರಃ**

4. ಪ್ರಾಸಾ1 ರವರು ತಮ್ಮ ಪ್ರಮಾಣಪತ್ರ / ಸಾಕ್ಷ್ಯದಲ್ಲಿ, ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲದೇ ಇದ್ದರೂ ಸಹ ಅವರಿಗೆ ಮೋಸ ಮಾಡುವ ಉದ್ದೇಶದಿಂದ, ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

**ಉತ್ತರ -**

5. ನಿಮ್ಮ ಪರ ಸಾಕ್ಷಿಗಳಿವೆಯೇ?

**ಉತ್ತರಃ**

6. ನೀವು ಹೆಚ್ಚಿಗೆ ಹೇಳುವುದು ಏನಾದರೂ ಇದೆಯೇ?

**ಉತ್ತರಃ**

ಮೇಲ್ಕಂಡ ಆರೋಪಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿದ್ದು, ಆರೋಪಿಯು ನೀಡಿದ ಉತ್ತರವನ್ನು ಹಾಗೆಯೇ ದಾಖಲಿಸಿಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**(ಮನು ಪಟೇಲ್ ಬಿ.ವೈ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಜೆ.ಎಂ.ಎಫ್.ಸಿ., ಹುಣಸೂರು.

ದಿನಾಂಕಃ 27.06.2024